## ಟ್ರೂಕಾಲರ್

ಫೋನ್‌ಬುಕ್ ಅನ್ನು ಹೆಚ್ಚು ಬಳಕೆದಾರ ಸ್ನೇಹಿ ಮಾಡಿದ ಈ ಆ್ಯಪ್ ಅನ್ನು ಕೆಲವು ಬದಲಾವಣೆ ಮಾಡಿ ಪುನಃ ಬಿಡುಗಡೆ ಮಾಡಲಾಗಿದೆ. ಐಒಎಸ್ ನ ಈ ಆ್ಯಪ್ ವಿಗೆಟ್ ಹುಡುಕಾಟಕ್ಕೆ ನೆರವು ನೀಡಲಿದ್ದು, ಮಿಸ್ಡ್ ಕಾಲ್ ಹುಡುಕುವ ಕೆಲಸವನ್ನು ಸರಳಗೊಳಿಸಿದೆ. ಸಾಮಾಜಿಕ ಜಾಲತಾಣ ಸೇರಿದಂತೆ ವಿವಿಧ ಮೂಲಗಳ ಮಾಹಿತಿಯನ್ನು ನೀವು ಶೀಘ್ರವಾಗಿ ಪಡೆಯಬಹುದು. ನಿಮ್ಮ ಎಲ್ಲಾ ಡಿವೈಸ್ ಹಾಗೂ ವೇದಿಕೆಗಳನ್ನು ಜಾಲಾಡಿ ಪ್ರೊಫೈಲ್‌ಗಳನ್ನು ಸಂಪರ್ಕಿಸಬಹುದು. ಒಂದೇ ಒಂದು ಸ್ವೈಪ್ ಮೂಲಕ ಕರೆ ಮಾಡಬಹುದು ಅಥವಾ ಸಂದೇಶ ಕಳಿಸಬಹುದು.




## ಆ್ಯಪಲ್ ಸ್ಮಾರ್ಟ್‌ವಾಚ್



ಬಹು ದಿನಗಳಿಂದ ನಿರೀಕ್ಷಿಸಿದ್ದ ಆ್ಯಪಲ್ ಸ್ಮಾರ್ಟ್‌ವಾಚ್ ಕೊನೆಗೂ ಮಾರುಕಟ್ಟೆಗೆ ಬರಲು ಸಜ್ಜಾಗಿದೆ. ಈ ಸ್ಮಾರ್ಟ್‌ವಾಚ್ ಸಲುವಾಗಿ ನೂರಾರು ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಕಂಪೆನಿಯ ಸಿಇಒ ಟಿಮ್ ಕುಕ್ ಹೇಳಿದ್ದು ಏಪ್ರಿಲ್ ಎರಡನೇ ವಾರದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಈ ವಾಚ್‌ಗೆ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿವೆ. ಕರೆ ಮಾಡಬಹುದಲ್ಲದೇ ಖರೀದಿಗೆ ಹಣ ನೀಡಬಹುದು. ಇ-ಮೇಲ್ ಓದಬಹುದು. ಗ್ಯಾರೇಜ್ ಬಾಗಿಲನ್ನೂ ರಿಮೋಟ್‌ನಂತೆ ತೆರೆಯಬಹುದು. ಹೋಟೆಲ್ ಕೊಠಡಿಯ ಲಾಕ್ ತೆರೆಯಬಹುದು ಎಂದು ಹೇಳಿಕೊಂಡಿರುವ ಕಂಪೆನಿ, ದರವನ್ನು 349 ಡಾಲರ್‌ನಿಂದ 10 ಸಾವಿರ ಡಾಲರ್‌ವರೆಗೆ ನಿಗದಿಪಡಿಸಿದೆ. ದಿನಕ್ಕೆ 18 ಗಂಟೆ ಕಟ್ಟಿಕೊಳ್ಳಬಹುದು. ಅಂದರೆ ಬ್ಯಾಟರಿಯನ್ನು ಒಮ್ಮೆ ಚಾರ್ಜ್ ಮಾಡಿದರೆ18 ಗಂಟೆ ಬಳಸಬಹುದು.

## ಸೋಲಾರ್ ಸೆಲ್

ವಿಶ್ವಾದ್ಯಂತ ಪ್ರತಿ ವರ್ಷ ಸಾವಿರಾರು ಮಂದಿ ಚರ್ಮದ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಬಿಸಿಲಿನಲ್ಲಿರುವ ಅತಿ ನೇರಳೆ ಕಿರಣಗಳು ಇದಕ್ಕೆ ಕಾರಣ. ಇದಕ್ಕಾಗಿ ಆ್ಯಪ್ ಅನ್ನು ರೂಪಿಸಲಾಗಿದ್ದು, ಯಾವಾಗ ಸೂರ್ಯನ ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ತಪ್ಪಿಸಿಕೊಳ್ಳಬಹುದು ಎಂದು ಇದು ಸೂಚನೆ ನೀಡುತ್ತದೆ. ಸ್ಥಳ, ಸಮಯ, ಬಿಸಿಲಿನ ತಾಪ ಮೊದಲಾದ ದಾಖಲೆಗಳನ್ನು ಇದರಲ್ಲಿ ಹಾಕಲಾಗಿದ್ದು, ಹೆಚ್ಚುವರಿ ಬಿಸಿಲಲ್ಲಿ ಓಡಾಡುವವರಿಗೆ ರಕ್ಷಣೆ ಮಾಡಿಕೊಳ್ಳಬೇಕೆಂಬ ಸೂಚನೆ ನೀಡುತ್ತದೆ. ಅಂದರೆ ಸನ್ ಸ್ಕ್ರೀನ್ ಲೋಷನ್ ಬಳಸಲು ಅಥವಾ ನೆರಳಿನಡಿ ನಿಲ್ಲಲು ನಿಮಗೆ ಅನುಕೂಲವಾಗುತ್ತದೆ.







## ನೋವಾ ಲಾಂಚರ್

ನಿಮ್ಮ ಡಿವೈಸ್‌ನ ಹೋಮ್ ಸ್ಕ್ರೀನ್ ಅನ್ನು ನಿಮಗೆ ಬೇಕಾದ ಹಾಗೆ ಬದಲಾಯಿಸುವ ಲಾಂಚರ್‌ಗಳನ್ನು ಆ್ಯಂಡ್ರಾಯ್ಡ್ ಬಿಡುಗಡೆ ಮಾಡಿದೆ. ಇವುಗಳಲ್ಲಿ ನೋವಾ ಹಲವು ವರ್ಷಗಳಿಂದ ಬಳಕೆದಾರರ ಅಚ್ಚುಮೆಚ್ಚಿನ ಲಾಂಚರ್ ಆಗಿದ್ದು, ಈಗ ಕೊಂಚ ಬದಲಾವಣೆ ಮಾಡಿ ಬಿಡಲಾಗಿದೆ. ಡಾಕ್‌ನಲ್ಲಿ ವಿಗೆಟ್‌ಗಳನ್ನು ಅಳವಡಿಸಿಕೊಳ್ಳಬಹುದು ಅಥವಾ ಸ್ಕ್ರಾಲಿಂಗ್ ಡಾಕ್ ಹಾಕಿಕೊಳ್ಳಬಹುದು. ಆ್ಯಪ್ ಐಕಾನ್‌ಗಳನ್ನೂ ನಿಮಗೆ ಬೇಕಾದ ಹಾಗೆ ಜೋಡಿಸಬಹುದು. ಒಟ್ಟಿನಲ್ಲಿ ನಿಮ್ಮ ಸ್ನೇಹಿತರ ಮೊಬೈಲ್‌ಗಿಂತ ಬೇರೆಯದೇ ವಿನ್ಯಾಸದಲ್ಲಿ ಹೋಂ ಸ್ಕ್ರೀನ್ ಮಾಡಿಕೊಳ್ಳಬಹುದು.

■ ಎಸ್. ತುಂಬೆ